# ಬೋರ್ಡ್ಯೂ ಮತ್ತು 'ಹ್ಯಾಬಿಟಸ್'

ಫ್ರೆಂಚ್ ಸಮಾಜಶಾಸ್ತ್ರಜ್ಞನಾದ ಪಿಯರ್ ಬೋರ್ಡ್ಯೂ (Pierre Bourdieu)ವು ತಾನು ಪ್ರತಿಪಾದಿಸಿದ 'theory of society (ಥಿಯರಿ ಆಫ್ ಸೊಸೈಟಿ - ಸಾಮಾಜಿಕ ಸಿದ್ಧಾಂತ)' ಸಮಗ್ರವಾದ ವಿಚಾರ ವಿಮರ್ಶೆಯ ಭಾಗವಾಗಿ, ಸಮಾಜದಲ್ಲಿನ 'ಅಧಿಕಾರದ ಬಗ್ಗೆ, ಫುಕೋ (Foucault)ವಿನಂತೆಯೇ ಪ್ರಸ್ತಾಪಿಸಿ ತನ್ನದೇ ಆದ ನಿಲುವುಗಳನ್ನು ತಳೆದಿದ್ದನಾದರೂ, ಅದರ ಕುರಿತಂತೆ ನ್ಯಾಯವಾದ ವಿವರಣೆಯನ್ನೊದಗಿಸುವುದಕ್ಕಾಗಲೀ ಅಥವಾ ಅದನ್ನು ಆನ್ವಯಿಕ ವಿಧಾನಗಳಾಗಿ ಅಭಿವ್ಯಕ್ತಿಗೊಳಸುವುದಕ್ಕಾಗಲೀ ನಮಗಿಲ್ಲಿ ಸಾಧ್ಯವಿಲ್ಲ (Navarro (ನವಾರೋ)2006). ಅವನ ವಿಚಾರಗಳು ಪ್ರಧಾನವಾಗಿ ಆಲ್ಜೀರಿಯಾ ಮತ್ತು ಫ್ರೆಂಚ್ ಸಮಾಜವನ್ನು ಕುರಿತಂತೆ ಆಗಿದ್ದರೂ ಸಹ, ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಗಳಲ್ಲಿನ ಅಧಿಕಾರವನ್ನು ವಿಶ್ಲೇಷಿಸುವುದರಲ್ಲಿ ಬೋರ್ಡ್ಯೂವಿನ ವಿಚಾರಧಾರೆಯನ್ನು ನಾವು ಉಪಯುಕ್ತವಾಗಿ ಕಂಡಿದ್ದೇವೆ ಎನ್ನಬಹುದು(Navarro, Moncrieffe, Eyben and Taylor and Boser in Eyben, Harris et.al. (ನವಾರೋ, ಮಾನ್ಕ್ರೀಫ್, ಇಬೆನ್ ಮತ್ತು ಟೇಲರ್ ಮತ್ತು ಬೋಸರ್ ರವರ ಲೇಖನಗಳನ್ನು ಇಬೆನ್, ಹ್ಯಾರಿಸ್ ಮತ್ತಿತರರು ನಲ್ಲಿ ನೋಡಿ) 2006; ವಿಶೇಷವಾಗಿ ನವಾರೋರವರು ಬೋರ್ಡ್ಯೂ ವಿನ ವಿಧಾನಕ್ಕೆ ನಿರ್ದಿಷ್ಟವಾದ ಘನ ಪರಿಚಯ ಒದಗಿಸುತ್ತಾರೆ).

ಫುಕೋವು ಅಧಿಕಾರವನ್ನು 'ಸರ್ವವ್ಯಾಪಿ' ಮತ್ತು ಕರ್ತೃತ್ವ (agency) ಅಥವಾ ಸಂರಚನೆಯನ್ನು ಮೀರಿದ್ದೆಂದು ಕಂಡಿದ್ದರೆ, ಅದೇ ಬೋರ್ಡ್ಯೂವು ಅಧಿಕಾರವನ್ನು ಸಾಂಸ್ಕೃತಿಕವಾಗಿ ಮತ್ತು ಸಾಂಕೇತಿಕವಾಗಿ ಸೃಜಿಸಲ್ಪಟ್ಟ ಹಾಗೂ ಕರ್ತೃತ್ವಗಳ ಮತ್ತು ಸಂರಚನೆಗಳ ಪರಸ್ಪರಕ್ರಿಯೆಗಳ ಮೂಲಕ ನಿರಂತರವಾಗಿ ನ್ಯಾಯಸಮ್ಮತಗೊಳಿಸುವ ಪ್ರಕ್ರಿಯೆಯಾಗಿ ಕಾಣುತ್ತಾನೆ. ಇದು ಸಂಭವಿಸುವ ಪ್ರಧಾನ ಮಾರ್ಗವೆಂದರೆ, ಆತನು 'habitus (ಹ್ಯಾಬಿಟಸ್-ಆಳವಾಗಿ ಬೇರು ಬಿಟ್ಟ ರೂಢಿಗಳು)' ಎಂದು ಕರೆದಿರುವ ಅಥವಾ ಚಿಂತನೆ ಮತ್ತು ವರ್ತನೆಗಳಿಗೆ ಮಾರ್ಗದರ್ಶನವಾಗಿರುವ ಸಾಮಾಜಿಕರಿಸಿದ ಮಾದರಿ ಅಥವಾ ಒಲವುಗಳೇ. ಹ್ಯಾಬಿಟಸ್ ಎಂದರೆ 'ವ್ಯಕ್ತಿಗಳಲ್ಲಿ ಚಿಂತಿಸಲು, ಭಾವಿಸಲು ಮತ್ತು ನಿರ್ಣಾಯಕ ರೀತಿಯಲ್ಲಿ ಸಕ್ರಿಯರಾಗಲು ಸಮಾಜವು ಶಾಶ್ವತವಾದ ಪ್ರವೃತ್ತಿಗಳಾಗಿ, ಅಥವಾ ಸಿದ್ಧಪಡಿಸಿದ ಸಾಮರ್ಥ್ಯಗಳಾಗಿ ಮತ್ತು ಸಂರಚಿತ ಹುಟ್ಟೊಲವುಗಳಾಗಿ ನೆಲೆಗೊಳ್ಳುವ ನಂತರದ ಮುನ್ನಡೆಸುವ ಮಾರ್ಗ' (Wacquant (ವಾಕಾಂಟ್) 2005:316, Navarro (ನವಾರೋ) 2006:16 ರಲ್ಲಿ ಉಲ್ಲೇಖಿಸಲಾಗಿದೆ).

ಹ್ಯಾಬಿಟಸ್ ಎಂಬುದು ವ್ಯಕ್ತಿ ಆಧಾರಿತ ಪ್ರಕ್ರಿಯೆಗಿಂತಲೂ ಸಾಮಾಜಿಕ ಪ್ರಕ್ರಿಯೆಯಿಂದ ಸೃಜಿಸಲ್ಪಟ್ಟು, ಉಳಿಯುವ ಮತ್ತು ಸಂದರ್ಭದಿಂದ ಸಂದರ್ಭಕ್ಕೆ ದಾಟಿಸಬಹುದಾದದ್ದು ಮಾತ್ರವಲ್ಲದೇ, ಸಮಯಾಂತರದಲ್ಲಿ ಮತ್ತು ನಿರ್ದಿಷ್ಟ ಸಂದರ್ಭಗಳಿಗೆ ಸಂಬಂಧಿಸಿದಂತೆ ಬದಲಾಗುವಂತಹ ವಿನ್ಯಾಸಗಳಿಗೆ ದಾರಿಮಾಡಿಕೊಡುತ್ತದೆ. ಹ್ಯಾಬಿಟಸ್ 'ನಿಶ್ಚಿತವೂ ಅಲ್ಲ, ಶಾಶ್ವತವೂ ಅಲ್ಲ, ಮತ್ತು ಅನಿರೀಕ್ಷಿತ ಸಂದರ್ಭಗಳಲ್ಲಿ ಅಥವಾ ದೀರ್ಘವಾದ ಐತಿಹಾಸಿಕ ಕಾಲಾವಧಿಯಲ್ಲಿ ಬದಲಾಗಲೂ ಬಹುದು' (ನವಾರೋ 2006:16):

ಹ್ಯಾಬಿಟಸ್ ದೃಢಸಂಕಲ್ಪದ ಫಲಿತವೂ ಅಲ್ಲ ಅಥವಾ ಸಂರಚನೆಗಳಿಂದ ನಿರ್ಧಾರಿತವೂ ಅಲ್ಲ, ಆದರೆ ಅದು ಅವೆರಡರ ನಡುವಿನ ಪರಸ್ಪರಕ್ರಿಯೆಯಿಂದ ಕಾಲಾಂತರದಲ್ಲಿ ಸೃಜಿಸಲ್ಪಡುತ್ತದೆ: ಗತ ಸಂಗತಿಗಳು ಮತ್ತು ಸಂರಚನೆಗಳಿಂದ ರೂಪಿಸಲ್ಪಟ್ಟು ಮತ್ತು ಪ್ರಸಕ್ತ ಆಚರಣೆ ಮತ್ತು ಸಂರಚನೆಗಳನ್ನು ರೂಪಿಸುವ ಇದು, ಮುಖ್ಯವಾಗಿ ಈ ಆಚರಣೆ ಹಾಗೂ ಸಂರಚೆನೆಗಳಿಗೆ ನಮ್ಮ ಗ್ರಹಿಕೆಗಳು ಒಗ್ಗಿಕೊಳ್ಳುವ ಹಾಗೆ ಮಾಡುವ ಪ್ರವೃತ್ತಿಗಳಾಗಿವೆ (Bourdieu

(ಬೋರ್ಡ್ಯೂ) 1984:170). ಈ ಅರ್ಥದಲ್ಲಿ ನೋಡಿದಾಗ, ಹ್ಯಾಬಿಟಸ್ ಎಂಬುದು ಅಪ್ರಜ್ಞಾಪೂರ್ವಕವಾಗಿ ಹಾಗೂ ಸಾಮಂಜಸ್ಯದ ಉದ್ದೇಶಪೂರ್ವಕ ಅನುಸರಣೆಯಿಲ್ಲದೇ......'ಯಾವುದೇ ಪ್ರಜ್ಞಾಪೂರ್ವಕ ಏಕಾಗ್ರತೆಯಿಲ್ಲದೇ ಸೃಷ್ಟಿಯಾಗುತ್ತದೆ ಮತ್ತು ಪುನರಾವರ್ತಿಸುತ್ತದೆ'( ಅದೇ: 170).

ಬೋರ್ಡ್ಯೂ ಪರಿಚಯಿಸಿದ ಎರಡನೆಯ ಪ್ರಮುಖ ಪರಿಕಲ್ಪನೆಯೆಂದರೆ ಅದು 'ಬಂಡವಾಳ' ಕುರಿತಾದದ್ದು ಆಗಿದೆ. ಅದು ಭೌತಿಕ ಆಸ್ತಿಯೆಂಬ ಕಲ್ಪನೆಯನ್ನು ಮೀರಿ ಸಾಮಾಜಿಕ, ಸಾಂಸ್ಕೃತಿಕ ಅಥವಾ ಸಾಂಕೇತಿಕ ಸ್ವರೂಪದ ಬಂಡವಾಳವಾಗಿ ವಿಸ್ತರಿಸುತ್ತದೆ (ಬೋರ್ಡ್ಯೂ 1986: ನವಾರೋ 2006:16 ರಲ್ಲಿ ಉಲ್ಲೇಖಿಸಲಾಗಿದೆ). ಈ ರೂಪಗಳ ಬಂಡವಾಳಗಳೆಲ್ಲಾ ಸಮಾನವಾಗಿಯೇ ಪ್ರಮುಖವಾಗಿವೆ ಮತ್ತು ಅವುಗಳನ್ನು ಸಂಗ್ರಹಿಸಬಹುದಾಗಿದೆ ಹಾಗೂ ಒಂದು ಕ್ಷೇತ್ರದಿಂದ ಇನ್ನೊಂದಕ್ಕೆ ದಾಟಿಸಬುಹುದಾಗಿದೆ (ನವಾರೋ 2006:17). ಸಾಂಸ್ಕೃತಿಕ ಬಂಡವಾಳ - ಮತ್ತು ಅದನ್ನು ಸೃಜಿಸಿದ ಅಥವಾ ಬೇರೆ ಬಂಡವಾಳಗಳಿಂದ ದಾಟಿಸಿದ ಮಾರ್ಗ - ಸಾಮಾಜಿಕ ಅಧಿಕಾರ ಸಂಬಂಧಗಳಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಏಕೆಂದರೆ, 'ವರ್ಗಗಳು ಅಭಿರುಚಿಯ ಆಧಾರದ ಮೇಲೆ ತಮ್ಮನ್ನು ಪ್ರತ್ಯೇಕಿಸಿಕೊಳ್ಳುವುದರಿಂದ ಇದು ಆರ್ಥಿಕ ಸ್ವರೂಪವಿರದ ಪ್ರಾಬಲ್ಯ ಮತ್ತು ವರ್ಗಶ್ರೇಣಿಗಳಿಗೆ ದಾರಿ ಮಾಡಿಕೊಡುತ್ತದೆ'(Gaventa (ಗವೆಂಟಾ)2003:6). ಭೌತಿಕ ಬಂಡವಾಳದಿಂದ ಸಾಂಸ್ಕೃತಿಕ ಮತ್ತು ಸಾಂಕೇತಿಕ ಸ್ವರೂಪದ ಬಂಡವಾಳಗಳ ಕಡೆಗಿನ ಬದಲಾವಣೆಯೇ ಬಹು ಮಟ್ಟಿಗೆ ಅಸಮಾನತೆಯ ಹಿಂದಿರುವ ಕಾರಣಗಳನ್ನು ಮರೆ ಮಾಡುತ್ತದೆ.

ಈ ಕಲ್ಪನೆಗಳನ್ನು ಬೋರ್ಡ್ಯೂವಿನ ಫ್ರೆಂಚ್ ಸಮಾಜದ ಶ್ರೇಷ್ಠ ಅಧ್ಯಯನ Distinction(ಡಿಸ್ಟಿಂಕ್ಷನ್) (1986) ನಲ್ಲಿ ವಿಸ್ತರಿಸಲಾಗಿದ್ದು, ಅದರಲ್ಲಿ ಆತನು 'ಸಾಮಾಜಿಕ ವ್ಯವಸ್ಥೆಯು ಹೇಗೆ ಜನರ ಮನಸ್ಸಿನಲ್ಲಿ' ಶಿಕ್ಷಣ ವ್ಯವಸ್ಥೆ, ಭಾಷೆ, ಅಭಿಪ್ರಾಯಗಳು, ಮೌಲ್ಯಗಳು, ವರ್ಗೀಕರಣದ ವಿಧಾನಗಳು ಮತ್ತು ದೈನಂದಿನ ಚಟುವಟಿಕೆಗಳನ್ನೂ ಒಳಗೊಂಡಂತೆ ''ಸಾಂಸ್ಕೃತಿಕ ವಿಷಯಗಳ ಮೂಲಕ' ಹಂತಹಂತವಾಗಿ ಅಚ್ಚೊತ್ತಲಾಗಿದೆ ಎಂದು ತೋರಿಸುತ್ತಾನೆ (1986:471). ಇವೆಲ್ಲವೂ ಸಾಮಾಜಿಕ ವ್ಯತ್ಯಾಸಗಳ ಮತ್ತು ವರ್ಗಶ್ರೇಣಿಗಳ ಅಪ್ರಜ್ಞಾಪೂರ್ವಕ ಸ್ವೀಕಾರದ ಕಡೆಗೆ ಮತ್ತು ಒಬ್ಬ ವ್ಯಕ್ತಿಗೆ ತನ್ನ ಸ್ಥಾನದ ಬಗ್ಗೆ ಅರಿವು ಮೂಡಿಸುವ ಮತ್ತು ತನ್ನನ್ನು ತಾನೇ ಪ್ರತ್ಯೇಕವಾಗಿ ಇರಿಸಿಕೊಳ್ಳುವ ವರ್ತನೆಗಳ ಕಡೆಗೆ ಮುನ್ನಡೆಸುತ್ತವೆ (ಅದೇ:141) ಎಂಬುದನ್ನೂ ಇಲ್ಲಿ ತೋರಿಸಲಾಗಿದೆ.

ಬೋರ್ಡ್ಯೂವಿನ ಸಿದ್ಧಾಂತದಲ್ಲಿ ಮೂರನೆಯ ಪ್ರಮುಖ ಪರಿಕಲ್ಪನೆಯು 'ಕ್ಷೇತ್ರ''ಗಳದ್ದಾಗಿದ್ದು, ಇವುಗಳೆಂದರೆ, ಜನರು ತಮ್ಮ ಮನೋಭಾವನೆಗಳನ್ನು ಅಭಿವ್ಯಕ್ತಿಗೊಳಿಸಲು ಮತ್ತು ಪುನರಾವರ್ತಿಸಲು ಹಾಗೂ ತಮ್ಮ ವಿವಿಧ ರೀತಿಯ ಬಂಡವಾಳಗಳನ್ನು ಹಂಚಲು ಸ್ಪರ್ಧಿಸುವ ಸಾಮಾಜಿಕ ಮತ್ತು ಸಾಂಸ್ಥಿಕ ಕ್ಷೇತ್ರಗಳಾಗಿವೆ (ಗವೆಂಟಾ 2003:6) 'ಕ್ಷೇತ್ರ' ವೆಂದರೆ ಒಂದು ಜಾಲ, ಬೌದ್ಧಿಕ, ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಇತ್ಯಾದಿ ಸಂಬಂಧಗಳ ಒಂದು ಗಣ ಅಥವಾ ಒಂದು ಸಂರಚನೆ (ನವಾರೋ 2006:18). ಯಾವುದೇ ಒಂದು ಸಂದರ್ಭದಲ್ಲಿ ತಾವು ಯಾವ ಕ್ಷೇತ್ರದಲ್ಲಿದ್ದಾರೆ ಎನ್ನುವುದನ್ನು ಅವಲಂಬಿಸಿ ಜನರು ಅನೇಕ ವೇಳೆ ಅಧಿಕಾರವನ್ನು ಬೇರೆ ಬೇರೆಯಾಗಿ ಅನುಭವಿಸುತ್ತಾರೆ (ಗವೆಂಟಾ 2003:6), ಆದ್ದರಿಂದ ಸಂದರ್ಭ ಮತ್ತು ಪರಿಸರಗಳು ಹ್ಯಾಬಿಟಸ್ ಮೇಲೆ ಪ್ರಮುಖ ಪ್ರಭಾವ ಬೀರುತ್ತವೆ:

'ಬೋರ್ಡ್ಯೂವು (1980) ತನ್ನ ಸಿದ್ಧಾಂತದಲ್ಲಿ ಜನರು ಬೇರೆ ಬೇರೆ ಸಂದರ್ಭಗಳೊಡನೆ ಮುಖಾಮುಖಿಯಾದಾಗ, ಅಥವಾ ಅವುಗಳು ಅವರಿಗೆ ಸವಾಲೊಡ್ಡಿದಾಗ ಉಂಟಾಗುವ ಒತ್ತಡಗಳು ಮತ್ತು ವಿರೋಧಾಭಾಸಗಳಿಗೆ ವಿವರಣೆಯನ್ನು ನೀಡುತ್ತಾರೆ. ಅವನ ಸಿದ್ಧಾಂತವನ್ನು ಜನ ಹೇಗೆ (ಒಂದು ಕ್ಷೇತ್ರದಲ್ಲಿ) ಅಧಿಕಾರವನ್ನು ಮತ್ತು

ಪ್ರಾಬಲ್ಯವನ್ನು ಪ್ರತಿರೋಧಿಸಿ ಮತ್ತೊಂದರಲ್ಲಿ ಸಹಭಾಗಿತ್ವವನ್ನು ವ್ಯಕ್ತಪಡಿಸುತ್ತಾರೆ ಎನ್ನುವುದನ್ನು ವಿವರಿಸಲು ಬಳಸಬಹುದು' (ಮಾನ್ಕ್ರೀಫ್ 2006:37).

ಕ್ಷೇತ್ರಗಳು ಭೇದಾತ್ಮಕ ಅಧಿಕಾರವನ್ನು ವಿವರಿಸಲು ಸಹಾಯ ಮಾಡುತ್ತವೆ. ಉದಾಹರಣೆಗೆ, ಮಹಿಳೆಯರ ಖಾಸಗಿ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಅನುಭವಿಸುವ ಅಧಿಕಾರವು ಭಿನ್ನವಾಗಿರುತ್ತದೆ ಎನ್ನುವುದನ್ನು ಮಾನ್ಕ್ರೀಫ್ ಯುಗಾಂಡದ ಮಹಿಳಾ ಸಂಸತ್ ಸದಸ್ಯೆಯೊಬ್ಬಳೊಡನೆ ನಡೆಸಿದ ತಮ್ಮ ಸಂದರ್ಶನದಲ್ಲಿ ಸಾರ್ವಜನಿಕವಾಗಿ ಅಧಿಕಾರ ಚಲಾಯಿಸುವ ಆಕೆಯು, ಅದೇ ತನ್ನ ಮನೆಯಲ್ಲಿ ಗಂಡನಿಗೆ ವಿಧೇಯಳಾಗಿ ವರ್ತಿಸುವುದನ್ನು ತೋರಿಸುತ್ತಾರೆ (2006:37). ಇದು ಸ್ತ್ರೀವಾದಿಗಳು ಮತ್ತು ಸಂಶೋಧಕರಿಂದ ವಿಸ್ತೃತವಾಗಿ ಅವಲೋಕಿಸಲ್ಪಟ್ಟಿದೆ ಹಾಗೂ ಅದು ಪುರುಷರು ಮತ್ತು ಮಹಿಳೆಯರು ಅಧಿಕಾರದ 'ಸಾರ್ವಜನಿಕ, ಖಾಸಗಿ ಮತ್ತು ನಿಕಟ' ಕ್ಷೇತ್ರಗಳಲ್ಲಿ ಭಿನ್ನವಾಗಿ ವರ್ತಿಸಲು ಸಾಮಾಜೀಕರಿಸಲ್ಪಟ್ಟಿರುತ್ತಾರೆ ಎಂದು ಹೇಳುವ ಇನ್ನೊಂದು ರೀತಿ ಆಗಿದೆ (VeneKlasen and Miller (ವೆನೆಕ್ಲಾಸನ್ ಮತ್ತು ಮಿಲ್ಲರ್)2002). Gender Perspectives on Power (ಜೆಂಡರ್ ಪರ್ಸ್ಪೆಕ್ಟೀವ್ಸ್ ಆನ್ ಪವರ್) ಮತ್ತು A New Weave of Power (ಎ ನ್ಯೂ ವೀವ್ ಆಫ್ ಪವರ್) ನ ಮೂರನೆಯ ಅಧ್ಯಾಯವಾದ Power and Empowerment ( ಪವರ್ ಅಂಡ್ ಎಂಪವರಮೆಂಟ್) ಅನ್ನು ನೋಡಿ.

ಬೋರ್ಡ್ಯೂವಿನ ಅಧಿಕಾರದ ಪರಿಕಲ್ಪನೆಯಲ್ಲಿ ಅಂತಿಮವಾದ ಮುಖ್ಯ ಪರಿಕಲ್ಪನೆಯೆಂದರೆ ಅದು 'doxa (ಡೋಕ್ಸಾ)' ಆಗಿದ್ದು, ಸಮಾಜದಲ್ಲಿ ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ರೂಢಿಗಳು ಮತ್ತು ನಂಬಿಕೆಗಳ ಸಂಯೋಗವಾಗಿರುತ್ತದೆ - ನಾವು ಮಾಡುವ ಭೇದಗಳ ಹಿಂದಿರುವ, ವ್ಯಕ್ತ ಪಡಿಸದ, ಪರೀಕ್ಷಿಸದೇ ಒಪ್ಪಿಕೊಂಡ ಊಹೆಗಳು ಅಥವಾ ''ಸಾಮಾನ್ಯ ಜ್ಞಾನ'' ಆಗಿರುತ್ತದೆ. ಸಮಾಜದಲ್ಲಿನ ಅಸಮಾನ ಭೇದಗಳ ಉಗಮಕ್ಕೆ ದಾರಿಮಾಡಿಕೊಟ್ಟಿರುವಂತಹ 'ಮಿತಿಗಳನ್ನು ನಾವು ಮರೆತಾಗ' ಡೋಕ್ಸಾ ಸಂಭವಿಸುತ್ತದೆ: ಅದು 'ಒಂದು (ಸಾಮಾಜಿಕ) ವ್ಯವಸ್ಥೆಯ ಸಂಬಂಧಗಳಿಗೆ ಬದ್ಧವಾಗಿರುತ್ತದೆ, ಮತ್ತು ಮನಸ್ಸಿನ ಪ್ರಪಂಚ ಹಾಗೂ ವಾಸ್ತವ ಪ್ರಪಂಚ ಎರಡೂ ಬೇರ್ಪಡಿಸಲಾಗದಂತೆ ರಚಿಸಲ್ಪಟ್ಟಿರುವುದರಿಂದ ಅವು ಸುಸ್ಪಷ್ಟ ಎಂದು ಸ್ವೀಕರಿಸಲಾಗುತ್ತದೆ' (ಬೋರ್ಡ್ಯೂ 1984:471) ಬೋರ್ಡ್ಯೂವು 'misrecognition (ಮಿಸ್ರೆಕಗ್ನಿಷನ್ - ತಪ್ಪಾಗಿ ಗುರುತಿಸುವಿಕೆ)' ಎನ್ನುವ ಪದವನ್ನು ಬಳಸಿದ್ದು, ಅದು ಮಾರ್ಕ್ಸನ 'ಹುಸಿ ಪ್ರಜ್ಞೆ' ಯ ಕಲ್ಪನೆಗಳಂತಿದೆ (ಗವೆಂಟಾ 2003:6). ಆದರೆ, ಆಳವಾದ ಮಟ್ಟಗಳಲ್ಲಿ ಕೆಲಸ ಮಾಡುವ ಅದರ ವ್ಯಾಪ್ತಿಯು ಯಾವುದೋ ಒಂದೋ ಅಥವಾ ಇನ್ನೊಂದು ಗುಂಪಿನ ಪ್ರಜ್ಞಾಪೂರ್ವಕ ಕೈವಾಡದ ಉದ್ದೇಶಗಳನ್ನು ಮೀರುತ್ತದೆ. ಮಾರ್ಕ್ಸನ ದೃಷ್ಟಿಕೋನಕ್ಕಿಂತ ಭಿನ್ನವಾಗಿರುವ 'ಮಿಸ್ರೆಕಗ್ನಿಷನ್' ಸೈದ್ಧಾಂತಿಕ ವಿಷಯವಾಗಿರುವುದಕ್ಕಿಂತ ಹೆಚ್ಚಾಗಿ ಒಂದು ಸಾಂಸ್ಕೃತಿಕ ಸಂಗತಿ. ಏಕೆಂದರೆ, ಅದು 'ಆಧಾರವಿಲ್ಲದೇ ಒಪ್ಪಿಕೊಂಡಿರುವ ಪೂರ್ವಗ್ರಹಿಕೆಗಳಿಗೆ ಸಾಮಾಜಿಕ ಬದುಕಿನ ಕ್ಷೇತ್ರವನ್ನು ಆಧಾರವಾಗಿಸುವ ಸಕ್ರಿಯ ಸಾಮಾಜಿಕ ಪ್ರಕ್ರಿಯೆಗಳ ಗುಂಪನ್ನು ಒಳಗೊಂಡಿರುತ್ತದೆ, ಮತ್ತು ನಿರ್ಣಾಯಕವಾಗಿ ಅವುಗಳು ಸಂಸ್ಕೃತಿಯ ನಡುವೆಯೇ ಹುಟ್ಟುತ್ತವೆ. ಅಧಿಕಾರದ ಎಲ್ಲಾ ಸ್ವರೂಪಗಳೂ ಸಹಮತತೆಯನ್ನು ಬಯಸುತ್ತವೆ ಮತ್ತು ಸಂಸ್ಕೃತಿಯು ಈ ಸಹಮತತೆಯನ್ನು ಚರ್ಚೆಗೆ ಒಳಪಡಿಸುವ ಕ್ಷೇತ್ರವಾಗಿ ಮತ್ತು ಅಂತಿಮವಾಗಿ, ಕರ್ತೃತ್ವರಲ್ಲಿ ವ್ಯಕ್ತವಾಗಿ, ಸಾಮಾಜಿಕ ವ್ಯತ್ಯಾಸಗಳನ್ನು ಮತ್ತು ಅಸಮಾನ ರಚನೆಗಳನ್ನು ಸೃಜಿಸುತ್ತದೆ' (ನವಾರೋ 2006:19).

ಇಲ್ಲಿ ಬಹಳಷ್ಟು ವಿಷಯಗಳು ಅಮೂರ್ತವಾಗಿವೆ ಎನ್ನಿಸಿದರೂ, ಬೋರ್ಡ್ಯೂವಿನ ಸಿದ್ಧಾಂತಗಳು ವಿಸ್ತಾರವಾದ ಸಮಾಜಶಾಸ್ತ್ರೀಯವಾದ ಸಂಶೋಧನೆ ಮತ್ತು ವಿಶಾಲ ಹರವಿನ ಸಾಮಾಜಿಕ ಸಂಗತಿಗಳ ಆಧಾರದಲ್ಲಿ ದೃಢವಾಗಿದೆ. ವಾಸ್ತವವಾಗಿ, ಅವರ ಸಂಶೋಧನೆಯು ಯಥೇಚ್ಛವಾಗಿದ್ದು ಮತ್ತು ಪ್ರಾಯೋಗಿಕವಾಗಿ ದಾಖಲಾಗಿರುವುದರಿಂದ ಅವರ

ಸಿದ್ಧಾಂತವು ಆಕರ್ಷಕವಾಗಿರಲು ಕಾರಣವಾಗಿದೆ. ಬೋರ್ಡ್ಯೂ ಸಮಾಜಶಾಸ್ತ್ರೀಯ ವಿಧಾನವನ್ನು ಸಾಮಾಜಿಕ ಬದಲಾವಣೆಯ ಒಂದು ಭಾಗವಾಗಿ ಕಾಣುತ್ತಾನೆ ಎನ್ನುವುದು ರಾಜಕೀಯಬದ್ಧ ಸಂಶೋಧಕರಿಗೆ ಅವರ ಸಿದ್ಧಾಂತದ ಮತ್ತೊಂದು ಆಕರ್ಷಕ ಅಂಶವಾಗಿದೆ. ಎಚ್ಚರಿಕೆಯಿಂದ ಮಾಡಿದ ವಿಶ್ಲೇಷಣೆಯು ಹ್ಯಾಬಿಟಸ್ ಮತ್ತು ಮಿಸ್ರೆಕಗ್ನಿಷನ್ ಗಳಿಂದ ಅದೃಶ್ಯವಾಗಿರುವ ಅಧಿಕಾರ ಸಂಬಂಧಗಳನ್ನು ಹೊರತರಲು ಸಹಾಯಕವಾಗುತ್ತದೆ (ನವಾರೋ 2006:19).

ಬೋರ್ಡ್ಯೂವು ಒಂದು 'ಆತ್ಮಾರ್ಥಕ ಸಮಾಜಶಾಸ್ತ್ರ (reflexive sociology)' ವನ್ನು ಸೂಚಿಸಿದ್ದು - ಅದರಲ್ಲಿ ವ್ಯಕ್ತಿಯು ತನ್ನ ಪೂರ್ವಾಗ್ರಹಗಳು, ನಂಬಿಕೆಗಳು ಮತ್ತು ಅರ್ಥ ಕೊಡುವ ಕ್ರಿಯೆಯಲ್ಲಿ ಊಹೆಗಳನ್ನು ಗುರುತಿಸಿ - ಈ ಆತ್ಮಾರ್ಥಕತೆಯು ಜನಪ್ರಿಯವಾಗುವ ಮೊದಲೇ ಪ್ರಸ್ತಾಪಿಸಿದನು. "ಸಾಮಾಜಿಕ ಅಸಮಾನತೆ ಮತ್ತು ವರ್ಗಶ್ರೇಣಿಯನ್ನು ವಿವರಿಸುವ", 'ಅಧಿಕಾರದ ಮೂಲಗಳನ್ನು' ತೆರೆದಿಡುವ ಸ್ವ-ವಿಮರ್ಶಾತ್ಮಕ ಜ್ಞಾನವೇ, ಸ್ವತಃ ಸಾಮಾಜಿಕ ವಿಮೋಚನೆಗೆ ದಾರಿ ಮಾಡಿಕೊಡಲು ಸಮರ್ಥವಾದ ಉಪಕರಣವಾಗಬಹುದು" (ನವಾರೋ 2006: 15-16).

ಬೋರ್ಡ್ಯೂವು ಬಳಸಿದ ವಿಧಾನಗಳು ಮತ್ತು ಪರಿಭಾಷೆಯು ಪವರ್ ಕ್ಯೂಬ್ ((powercube) ಅಧಿಕಾರ ಘನ) ನಲ್ಲಿ ಬಳಸಿದ್ದುದ್ದಕ್ಕಿಂತ ವಿಭಿನ್ನವಾಗಿದ್ದು, ವ್ಯಾಪಕವಾದ 'ಸಾಮಾಜಿಕ ಸಿದ್ಧಾಂತ" ದಲ್ಲಿ ಬೇರುಬಿಟ್ಟಿರುವ ಅಧಿಕಾರ ಸಂಬಂಧಗಳ ಅತಿ ಹೆಚ್ಚು ವಿವರವಾದ ಸಮಾಜಶಾಸ್ತ್ರೀಯ ವಿಶ್ಲೇಷಣೆಯನ್ನು ಸೂಚಿಸುತ್ತದೆ. ಹಾಗಾದರೂ, ಅನ್ವಯಿಕ ವಿಶ್ಲೇಷಣೆಯ ಪ್ರಯೋಜನಗಳು ಮತ್ತು ಕ್ರಿಯೆಗಳು, ಅಂತರ್ಗತವಾದ, ಅಗೋಚರವಾದ ಅಧಿಕಾರ ಮತ್ತು "ಆಂತರಿಕ ಅಧಿಕಾರ" ಮತ್ತು ಅಧಿಕಾರ ಘನದಲ್ಲಿ ಅಡಗಿರುವ 'ಬದಲಾವಣೆಯ ಸಿದ್ಧಾಂತ"ದ ಅರ್ಥಗಳನ್ನೇ ಪ್ರಬಲವಾಗಿ ಅನುರಣಿಸುತ್ತದೆ. ವಿಶೇಷವಾಗಿ ಅಗೋಚರವಾಗಿರುವ ಅಧಿಕಾರವನ್ನು ಬಯಲಿಗೆಳೆಯುವ ಕಲಿಕೆ ಮತ್ತು ವಿಶ್ಲೇಷಣೆಯ ಪ್ರಕ್ರಿಯೆಗಳ ಮೂಲಕ ಅಧಿಕಾರ ಮತ್ತು ಶಕ್ತಿ ಹೀನತೆಯನ್ನು ಅರ್ಥಮಾಡಿಕೊಳ್ಳುವುದೇ ಒಂದು ಸಬಲೀಕರಣ ಪ್ರಕ್ರಿಯೆಯಾಗಬಹುದು ಎನ್ನುವುದೇ ಇಲ್ಲಿರುವ ಕಲ್ಪನೆ.

ಅನುವಾದ: ಡಾ.ಎ ಜಿ ಗೋಪಾಲ ಕೃಷ್ಣ ಕೊಳ್ತಾಯ
ಪರಿಶೀಲನೆ: ಡಾ ಗಾಯತ್ರಿದೇವಿ ಕೆ ಜಿ

**References for further reading**

Bourdieu, P. (1980). The Logic of Practice. Stanford, Stanford University Press.

Bourdieu, P. (1984). Distinction: A Social Critique of the Judgement of Taste. London, Routledge.

Bourdieu, P. (1986). 'The Forms of Capital'. Handbook of Theory and Research for the Sociology of Capital. J.G. Richardson. New York, Greenwood Press: 241-58.

Gaventa, J. (2003). Power after Lukes: a review of the literature, Brighton: Institute of Development Studies.

Moncrieffe, J. (2006). “The Power of Stigma: Encounters with ‘Street Children’ and ‘Restavecs’ in Haiti.” IDS Bulletin 37(6): 31-46.

Navarro, Z. (2006). ‘In Search of Cultural Interpretation of Power’, IDS Bulletin 37(6): 11-22.

VeneKlasen, L. and V. Miller (2002). A New Weave of Power, People and Politics: The Action Guide for Advocacy and Citizen Participation. Oklahoma City, World Neighbors.

Wacquant, L. (2005). Habitus. International Encyclopedia of Economic Sociology. J. Becket and Z. Milan. London, Routledge.